# ಭಾರತೀಯ ವೈದ್ಯಲೋಕಕ್ಕೆ ಡಾ. ಈಡಾ ಸ್ಕಡರ್ ಅವರ ಕೊಡುಗೆ: ನೇಮಿಚಂದ್ರ ಅವರ ಸಾಹಿತ್ಯವನ್ನು ಅನುಲಕ್ಷಿಸಿ

ಸುಚಿತ್ರ ಕೆ.ಎಲ್.[1] & ಧನಂಜಯ[2]

[1]ಸಂಶೋಧನಾರ್ಥಿ, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

[2]ಸಹಾಯಕ ಪ್ರಾಧ್ಯಾಪಕರು, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

DOI: https://doi.org/10.5281/zenodo.17221751

## ABSTRACT:

ನೇಮಿಚಂದ್ರರವರು ಹಲವು ಸಾಹಿತ್ಯ ಪ್ರಕಾರಗಳಲ್ಲಿ ಕೃತಿಯನ್ನು ರಚಿಸಿದ್ದಾರೆ. ಅವುಗಳಲ್ಲಿ ಕಥೆ, ಕಾದಂಬರಿ, ಪ್ರವಾಸ ಕಥನ, ಅಂಕಣ ಸಾಹಿತ್ಯ, ಜೀವನ ಚರಿತ್ರೆ ಇತ್ಯಾದಿ ಪ್ರಮುಖವಾದವುಗಳು. ಪ್ರಸ್ತುತ ಲೇಖನವು ಜೀವನ ಚರಿತ್ರೆಯ ಕುರಿತು ಅಧ್ಯಯನ ಕೈಗೊಂಡಿದೆ. ಅದರಲ್ಲೂ ಪ್ರಮುಖವಾಗಿ ಭಾರತೀಯ ವೈದ್ಯಲೋಕಕ್ಕೆ ಎಂದೂ ಮರೆಯಲಾಗದಂತಹ ಕೊಡುಗೆಯನ್ನು ನೀಡಿರುವ ಡಾ. ಈಡಾ ಸ್ಕಡರ್ ಅವರ ಸಾಧನೆಯ ಹಲವಾರು ಆಸಕ್ತಿಕರವಾದ ಮಾಹಿತಿಗಳನ್ನು ಈ ಲೇಖನದಲ್ಲಿ ಕಾಣಬಹುದು.

## KEYWORDS:

ಈಡಾ ಸ್ಕಡರ್, ನೇಮಿಚಂದ್ರ, ಭಾರತೀಯ ವೈದ್ಯಲೋಕ, ಮಹಿಳೆ, ಮಿಷನರಿ.

ನೇಮಿಚಂದ್ರರವರು ಮಹಿಳಾ ಪರ ಚಿಂತಕರು. ಹಾಗಾಗಿ ಅವರು ಮಹಿಳೆಯರ ಕುರಿತಂತೆ ಇತಿಹಾಸ ಪುಟಗಳಿಂದ ಮರೆಯಾಗಿದ್ದ ಅದೆಷ್ಟೋ ವಿಷಯಗಳನ್ನು ತಮ್ಮ ಸಾಹಿತ್ಯದ ಮೂಲಕ ಬೆಳಕಿಗೆ ತಂದಿದ್ದಾರೆ. ಮೊದಲಿಗೆ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆಯನ್ನು ನೀಡಿದಂತಹ ಬೆಳಗರೆ ಜಾನಕಮ್ಮ ಅವರ ಬಗ್ಗೆ ಹಲವಾರು ಮಾಹಿತಿಗಳನ್ನು ನೀಡಿ, ಅವರ ಹೆಸರನ್ನು ಹಸಿರಾಗಿಸಿದ್ದಾರೆ. ರಾಸಾಯನಿಕ ವಿಜ್ಞಾನ ಮತ್ತು ಭೌತವಿಜ್ಞಾನ ಎರಡು ವಿಷಯಗಳಲ್ಲಿ ನೊಬೆಲ್ ಪಡೆದಂತಹ ಮೇರಿ ಕ್ಯೂರಿಯ ಕುರಿತು ವಿಸ್ಮಯಕಾರಿಯಾದ ಅಂಶಗಳನ್ನು ತಿಳಿಸಿಕೊಟ್ಟಿದ್ದಾರೆ. ಸಾಮಾಜಿಕ ಹೋರಾಟಗಾರ್ತಿ ಭಾಂವ್ರಿದೇವಿ, ಫ್ಲೇವಿಯಾ, ವೈದ್ಯಲೋಕಕ್ಕೆ ಅಮೋಘ ಕೊಡುಗೆಯನ್ನು ನೀಡಿ, ಭಾರತೀಯ ಮಹಿಳೆಯರು ವೈದ್ಯೆ, ನರ್ಸ್‌ಗಳಾಗುವಂತೆ ಮಾಡಿದಂತಹ ಡಾ. ಈಡಾ ಸ್ಕಡರ್ ಅವರ ಸೇವೆಯನ್ನು ತಿಳಿಸಿಕೊಟ್ಟಿದ್ದಾರೆ. ಪ್ರಾಣಿತಜ್ಞೆಯಾಗಿ ಚಿಂಪಾಂಜಿಗಳ ಬಗ್ಗೆ ಹಲವಾರು ಸಂಶೋಧನೆಗಳನ್ನು ಮಾಡಿದಂತಹ ಜೇನ್ ಗುಡಾಲ್ ಅವರ ಕುರಿತು ಪುಸ್ತಕಗಳನ್ನು ರಚಿಸಿ ಅದೆಷ್ಟೋ ವಿಷಯಗಳನ್ನು ಓದುಗರಿಗೆ ಉಣಬಡಿಸಿದ್ದಾರೆ.

ಪ್ರಸ್ತುತ ಈ ಲೇಖನದಲ್ಲಿ ನೇಮಿಚಂದ್ರ ಅವರು ಬರೆದಿರುವ ಡಾ. ಈಡಾ ಸೋಫಿಯಾ ಸ್ಕಡರ್‌ರವರು ಭಾರತೀಯ ವೈದ್ಯಕೀಯ ರಂಗಕ್ಕೆ ಸಲ್ಲಿಸಿದ ಸೇವೆಯ ಕುರಿತು ಮಾಹಿತಿಯನ್ನು ಹೊರಸೂಸುತ್ತದೆ. ಕ್ರೈಸ್ತ ಧರ್ಮದಲ್ಲಿ 'ಮಿಷನರಿ' ಎಂಬ ಧರ್ಮ ಪ್ರಚಾರಕರಿದ್ದಾರೆ. ಇವರು ಜಗತ್ತಿನ ಮೂಲೆ ಮೂಲೆಗಳಿಗೆ ಹೋಗಿ ಜನಸಾಮಾನ್ಯರಿಗೆ ವಿದ್ಯೆ, ಆರೋಗ್ಯ, ಸಾಮಾಜಿಕ ನ್ಯಾಯ, ಆರ್ಥಿಕ ಬೆಳವಣಿಗೆ ಮುಂತಾದ ಸಮಾಜ ಸುಧಾರಣಾ ಕೆಲಸವನ್ನ ಮಾಡುತ್ತಲೇ ಅಲ್ಲಿನ ಜನರಲ್ಲಿ ಕ್ರೈಸ್ತ ಧರ್ಮವನ್ನು ಬಿತ್ತಿ ಬೆಳೆಯುವ ದೀಕ್ಷೆಯನ್ನು ತೊಟ್ಟವರು. ಅಮೆರಿಕದಲ್ಲಿ 'ರಿಫಾರ್ಮ್ಡ್ ಚರ್ಚ್'ನ ಮೂಲಕ ನಾಲ್ಕು ತಲೆಮಾರಿನ ವೈದ್ಯರು ಭಾರತಕ್ಕೆ ಬಂದು ನೆಲೆಸಿ ಅಪರೂಪದ ಆರೋಗ್ಯ ಸೇವೆಗಳನ್ನು ಒದಗಿಸಿದವರು. ಈ ನಾಲ್ಕು ತಲೆಮಾರಿನ ವೈದ್ಯರಲ್ಲಿ ಮೂರನೇ ತಲೆಮಾರಿನ ವೈದ್ಯೆ ಈಡಾ ಸೋಫಿಯಾ ಸ್ಕಡರ್ ಆಗಿದ್ದಾರೆ.

ಭಾರತವು ಹಲವಾರು ಜಾತಿ, ಧರ್ಮಗಳನ್ನು ಒಳಗೊಂಡ ದೇಶವಾಗಿದೆ. ಇದರೊಂದಿಗೆ ಇಲ್ಲಿನ ನಂಬಿಕೆಗಳಷ್ಟೇ ಮೂಢನಂಬಿಕೆಗಳು ಯಥೇಚ್ಚವಾಗಿ ಕಂಡು ಬರುತ್ತಿವೆ. ಅದರಲ್ಲೂ ಇಲ್ಲಿಯ ಮಹಿಳೆ ತನ್ನ ಕರ್ತವ್ಯದಲ್ಲಿ ಸಂಪೂರ್ಣವಾಗಿ ತನ್ನನ್ನು ತೊಡಗಿಸಿಕೊಂಡಿದ್ದಾಳೆ. ಮೂಢನಂಬಿಕೆಗಳಿಂದಾಗಿ 'ಸತಿ ಪದ್ಧತಿ, ಶಿಶುಹತ್ಯೆ, ಹೆಣ್ಣಿಗೆ ವಿದ್ಯಾಭ್ಯಾಸದ ಅವಕಾಶ ಇಲ್ಲದಿರುವುದು, ಬಡತನ, ಅಜ್ಞಾನ, ಬರಗಾಲದಿಂದಾಗಿ ಲಕ್ಷಲಕ್ಷ ಜನರುಗಳು ಸಾಯುತ್ತಾರೆ. 'ಸಾವಿನ ಠಸ್ಸೆ ಒತ್ತಿ ನಿಂತ, ಮೂಳೆಚಕ್ಕಳವಾದ ಹಸಿದ ಸಾವಿರಾರು ಮಕ್ಕಳು, ಈಡಾಳ ಬಾಲ್ಯದ ಮರೆಯಲಾರದ ನೆನಪುಗಳಾಗಿದ್ದವು, ಅತಿ ನೋವಿನ ನೆನಪುಗಳು. ಈಡಾ ಬುಟ್ಟಿಯಲ್ಲಿ ಬ್ರೆಡ್ಡು ಎಷ್ಟೇ

ಚಿಕ್ಕದಾಗಿ ಮುರಿದರೂ ಸಾಲದು, ಅಷ್ಟು ಹಸಿದ ಬಾಯಿಗಳು ಅಲ್ಲಿದ್ದವು. ಈ ಮಕ್ಕಳು ಚಿಂದಿ ಬಟ್ಟೆಯಲ್ಲಿ, ಹೊರಗೆ ಹಸಿದು ಕಾದ ಅಪ್ಪ ಅಮ್ಮನಿಗೆ ಒಯ್ಯಲು ಒಂದಿಷ್ಟು ಬ್ರೆಡ್ಡಿನ ತುಂಡನ್ನು ಮುಚ್ಚಿಟ್ಟುಕೊಳ್ಳುತ್ತಿದ್ದವು'.[1] ಎಂಟು ವರುಷದ ಈಡಾಗೆ ಭಾರತದ ಬಡತನ ದರ್ಶನವಾಗಿತ್ತು. ಮಕ್ಕಳು ತಾವು ಬ್ರೆಡ್ಡು ತಿಂದು ತಂದೆತಾಯಿಗೆ ಕೊಡುವ ಅವರು ಅದಕ್ಕಾಗಿ ಕಾಯುವ ಪರಿಸ್ಥಿತಿ ನೋವಿನ ದರ್ಶನವಾಗುತ್ತದೆ ಇಂಥ ನೋವನ್ನು ನಿವಾರಿಸಲು ಈಡಾ ಬಯಸುತ್ತಾಳೆ.

ನಮ್ಮ ನೆಲದಲ್ಲೇ ಹುಟ್ಟಿದ ಈಡಾ ಅವರು ಭಾರತದ ಮಹಿಳೆಯರ ನೋವಿನ ಸ್ಥಿತಿಗೆ ಕರಗುತ್ತಾರೆ. ಭಾರತದ ಮಹಿಳೆಯರಿಗಾಗಿಯೇ ವೈದ್ಯಳಾಗಿ ಬರುತ್ತಾರೆ. ಇವರು ಅಮೆರಿಕದಲ್ಲಿ ವೈದ್ಯ ಪದವಿ ಪಡೆದು ಅಮೇರಿಕಾದ ಸರ್ವ ಸುಖವನ್ನು, ಸಂಪತ್ತನ್ನು ತೊರೆದು ಭಾರತಕ್ಕೆ ಹಿಂತಿರುಗುವಳು. ಮಹಿಳೆಯರಿಗೆ ವೈದ್ಯರಂಗಕ್ಕೆ ಪ್ರವೇಶ ಪಡೆಯಲು ಈಡಾಳಂತಹ ಮಹಿಳೆಯ ಪ್ರಯತ್ನದ ಹಿಂದೆ, ಮಹಿಳಾ ರೋಗಿಗಳಿಗೆ ಚಿಕಿತ್ಸೆ ಒದಗಿಸುವ ಮಾನವೀಯ ಉದ್ದೇಶವಿತ್ತು. ಸಂಪ್ರದಾಯಬದ್ಧ ಭಾರತದಲ್ಲಿ ಮಹಿಳೆಯರ ಚಿಕಿತ್ಸೆಗೆ ಮಹಿಳಾ ವೈದ್ಯರ ಅಗತ್ಯ ಹೆಚ್ಚಿತು. ಆದರೆ ಭಾರತದಲ್ಲಿ ಮೆಡಿಕಲ್ ಕಾಲೇಜುಗಳು ಮಹಿಳೆಯರಿಗೆ ಬಾಗಿಲು ಮುಚ್ಚಿದ್ದವು. ಪುರುಷ ವೈದ್ಯರ ಬಳಿ ತಮ್ಮ ಮುಟ್ಟು, ಬಸಿರು, ಬಾಣಂತನದಂತಹ ವಿಚಾರಗಳನ್ನು ಹೇಳಿಕೊಳ್ಳುವುದಂತೂ ಭಾರತೀಯ ಮಹಿಳೆಯರಿಗೆ ಸಾಧ್ಯವೇ ಇರಲಿಲ್ಲ. ಹೆರಿಗೆಯ ಸಮಯದಲ್ಲೂ ಯಾವ ವೈದ್ಯನೂ ಇರುತ್ತಿರಲಿಲ್ಲ. ಸೂಲಗಿತ್ತಿಯೋ, ಮನೆಯ ಅನುಭವಸ್ಥ ಹೆಂಗಸರೋ ಹೆರಿಗೆಗೆ ನೆರವಾಗುತ್ತಿದ್ದರು. ವೈದ್ಯರಂಗದ ಆಧುನಿಕ ಸವಲತ್ತುಗಳೊಂದೂ ಭಾರತೀಯ ಮಹಿಳೆಯರಿಗೆ ತಲುಪುತ್ತಿರಲಿಲ್ಲ, ಇದರಿಂದಾಗಿ ತಾಯಿಮಗುವಿನ ಸಾವು ಸಾಮಾನ್ಯವಾಗಿತ್ತು.

ನೀಲಿ ಕಣ್ಣುಗಳ, ಹೊನ್ನ ಕೂದಲಿನ ಸುಂದರ ಬಾಲೆ ಈಡಾ. ಐದು ಜನ ಅಣ್ಣಂದಿರ ಮುದ್ದಿನ ತಂಗಿ. ಈಡಾ ಡಿಸೆಂಬರ್ 9, 1870 ರಂದು ಜನಿಸುತ್ತಾರೆ. ತಮಿಳು ನಾಡಿನ ರಾಣಿಪೇಟೆಯಲ್ಲಿ ಇವರು ಈ ನೆಲದ ಹೆಣ್ಣು ಮಕ್ಕಳ ಭವಿಷ್ಯವನ್ನೇ ಬದಲಿಸುತ್ತಾಳೆ ಎಂದು ಯಾವ ಪ್ರವಾದಿಯೂ ನುಡಿದಿರಲಿಲ್ಲ.[2] ಈ ನೆಲದ ಹೆಣ್ಣು ಮಕ್ಕಳಿಗೆ ವೈದ್ಯರಂಗದ ಬಾಗಿಲು ಬಡಿದು ತೆರೆಸುತ್ತಾಳೆ. ಸಾವಿನ ಠಸ್ಸೆ ಒತ್ತಿ ನಿಂತ, ಮೂಳೆ ಚಕ್ಕಳವಾದ ಹಸಿದ ಸಾವಿರಾರು ಮಕ್ಕಳು, ಈಡಾಳ ಬಾಲ್ಯದ ಮರೆಯಲಾರದ ನೆನಪುಗಳಾಗಿವೆ. ಅವುಗಳು ಅತಿ ನೋವಿನ ನೆನಪುಗಳು, ಬುಟ್ಟಿಯಲ್ಲಿನ ಬ್ರೆಡ್ಡು ಎಷ್ಟೇ ಚಿಕ್ಕದಾಗಿ ಮುರಿದರೂ ಸಾಕು ಅಷ್ಟು ಹಸಿದ ಬಾಯಿಗಳು ಅಲ್ಲಿದ್ದವು. ಈ ಮಕ್ಕಳು ತಮ್ಮ ಚಿಂದಿ ಬಟ್ಟೆಯಲ್ಲಿ, ಹೊರಗೆ ಹಸಿದು ಕಾದ ಅಪ್ಪ ಅಮ್ಮನಿಗೆ ಒಯ್ಯಲು ಒಂದಿಷ್ಟು ಬ್ರೆಡ್ಡಿನ ತುಂಡನ್ನು ಮುಚ್ಚಿಟ್ಟುಕೊಳ್ಳುತ್ತಿದ್ದವು. ಅಲ್ಲದೇ ಹೊರಗೆ ಬಂದ ಮಕ್ಕಳ ಕೈಯನ್ನೇ ಆಸೆಯಿಂದ ದಿಟ್ಟಿಸಿ ನಿಂತ ತಾಯಿ ತಂದೆಯವರು ನೋಡುತ್ತಿದ್ದರು.

ಎದೆ ಒಡೆಯುವಂತ ಸ್ಥಿತಿಗತಿಯನ್ನು ಈಡಾ ಕಣ್ಣಾರೆ ಕಾಣುವಳು. ಸಾವು ನೋವನ್ನು ನಿವಾರಿಸಲು ತನ್ನ ಮನದೊಳಗೆ ಪ್ರಯತ್ನಿಸುತ್ತಾಳೆ.

ಕಿಶೋರ ವಯಸ್ಸಿನ ಈಡಾ ಸಾವಿರಾರು ಮೈಲಿಗಳಾಚೆ ಅಮೇರಿಕಾದ ಶಾಲೆಯಲ್ಲಿದ್ದಳು. ಸಮೃದ್ಧವಾದ ದೇಶದಲ್ಲಿದ್ದ ಈಡಾ ತಾನು ಬಾಲ್ಯದಲ್ಲಿ ಕಂಡ ದೂರದ ಬಡ ಭಾರತದ ನೋವಿನ ಚಿತ್ರಗಳನ್ನು ಮರೆಯಲು ಬಯಸಿದಳು, ಆದರೆ ಅದು ಸಾಧ್ಯವಾಗುವುದಿಲ್ಲ. ಶಾಲೆಯಲ್ಲಿ ಆಟದಲ್ಲಿ, ಪಾಠದಲ್ಲಿ, ತುಂಟತನದಲ್ಲಿ, ಕೀಟಲೆಯಲ್ಲಿ ಮುಂದಿದ್ದ ಈಕೆ ಶಾಲಾ ದಿನಗಳನ್ನು ಅತ್ಯಂತ ಸಂಭ್ರಮದಿಂದ ಕಳೆಯುತ್ತಾರೆ. ದಿನಗಳು, ವರುಷಗಳು ಕಳೆದು ದೊಡ್ಡವಳಾಗಿ ಬೆಳೆಯುತ್ತಿರುವ ಈಡಾಗೆ ಹತ್ತೊಂಬತ್ತು ವರುಷ ತಾನು ಕಂಡ ಭಾರತದ ಪರಿವಿಲ್ಲದೇ ಪಾದ್ರಿಗಳಿಗೆ, ನೃತ್ಯಕೂಟಕ್ಕೆ ಹೋಗಿ ಸಂಭ್ರಮದಲ್ಲಿದ್ದರು. ಇವರ ತಂದೆತಾಯಿಗಳು ಭಾರತದಲ್ಲಿ ವಾಸವಿದ್ದರು. 'ನಿನ್ನ ಅಮ್ಮನಿಗೆ ಹುಷಾರಿಲ್ಲ, ನಿನ್ನ ಅಗತ್ಯವಿದೆ ತಕ್ಷಣ ಹೊರಟು ಬಾ' ಎಂದು ತಕ್ಷಣ ಕರೆ ಬರುತ್ತದೆ. ಭಾರತಕ್ಕೆ ಬರಲು ಇಷ್ಟವಿಲ್ಲದಿದ್ದರೂ ಅಮ್ಮ ಕಾಯಿಲೆ ಬಿದ್ದಿದ್ದರಿಂದ ಮತ್ತೆ ಮರಳುವ ಉದ್ದೇಶದಿಂದ ಭಾರತಕ್ಕೆ ಬಂದಿಳಿದರು. 'ತಿಂಡಿವನಂ' ಈಡಾ ಬಂದಿಳಿದ ಸ್ಥಳವಾಗಿತ್ತು. ಇವರ ತಂದೆ ಡಾ. ಜಾನ್ ಸ್ಕಡರ್, ಮೂಲತಃ ವೈದ್ಯರಾಗಿದ್ದರು. ಈ ಸ್ಥಳಕ್ಕೆ ಮಿಷನ್ ಕಳುಹಿಸಿತು. ಇವರು ಈ ಬಡ ಜನರ ದೇಹ ಮನಸ್ಸುಗಳನ್ನು ವಾಸಿ ಮಾಡುವ ಪಣತೊಟ್ಟು, ತಮ್ಮ ಬದುಕನ್ನೇ ಭಾರತದಲ್ಲಿ ಕಳೆಯುತ್ತಾರೆ. ಅತಿ ಬಡತನದ ತಾಣದಲ್ಲಿ ಮಳೆ ಬಾರದಿದ್ದಾಗ ಬರಗಾಲದ ಪಿಡುಗಿನಲ್ಲಿ, ಕಾಲರಾ, ಮಲೇರಿಯಾ, ಪ್ಲೇಗ್ ಹೀಗೆ ನೂರೊಂದು ಉಷ್ಣವಲಯದ ರೋಗಗಳ ಹರಡುವಿಕೆಯ ಜಾಗದಲ್ಲಿಯೇ ಮಿಷನರಿಯ ಕೆಲಸವಾಗಿತ್ತು.

ಮದ್ರಾಸಿನಿಂದ 60 ಮೈಲಿ ದೂರದಲ್ಲಿದ್ದ ತಿಂಡಿವನಂಗೆ ಬಂದಿಳಿದಿದ್ದ ಈಡಾಗೆ ಭಾರತದಲ್ಲಿ ನೆಲೆಸುವ ಯಾವ ಆಲೋಚನೆಯೂ ಇರುವುದಿಲ್ಲ. ಅದರ ಬದಲಾಗಿ ಅಮೇರಿಕಾಗೆ ಹೋಗುವ ನಿರ್ಧಾರವನ್ನು ಮಾಡಿದ್ದಳು. ಆದರೆ ಒಂದು ರಾತ್ರಿ ಅವಳ ಜೀವನ ಗುರಿ, ಉದ್ದೇಶವನ್ನು ಬದಲಾಯಿಸಿತು. ಈಡಾಗೆ ತಿಳಿದಿತ್ತು, ತಾನು ಆಯ್ದ ಹಾದಿಯ ಪಯಣದಲ್ಲಿ ಇಂತಹ ಅದೆಷ್ಟೋ ಹೋರಾಟಗಳು ಕಾದಿವೆಯೆಂದು. ರೋಗಗಳೊಡನೆ ತಾನು ಬಡತನ, ಅನಕ್ಷರತೆ, ಮೂಢನಂಬಿಕೆಗಳೊಡನೆಯೂ ಹೋರಾಡಬೇಕೆಂದು'.[3] ಅವುಗಳಲ್ಲಿ ಮೊದಲ ಘಟನೆ ಬ್ರಾಹ್ಮಣ ವ್ಯಕ್ತಿಯ ಹೆಂಡತಿಗೆ ಹೆರಿಗೆ ನೋವು ಬಂದಿದ್ದ ಸಂದರ್ಭದಲ್ಲಿ ಹೆಣ್ಣಿನಿಂದ ಮಾತ್ರ ಆತನ ಪತ್ನಿಗೆ ಹೆರಿಗೆಯಾಗಬೇಕು ಎಂಬುದಾಗಿತ್ತು. ಅದೇ ರಾತ್ರಿ ಕೇಳಿದಂತಹ ಮತ್ತೊಂದು ಸಪ್ಪಳ ಹಲವು ಮಕ್ಕಳನ್ನು ಹಡೆದು ಈ ಮಗುವಿಗೆ ಜನ್ಮ ನೀಡಲು ಕಷ್ಟಪಡುತ್ತಿರುವ ಹೆಂಡತಿಯನ್ನು ಉಳಿಸಿಕೊಡಿ ಎಂದು ಕೇಳಲು ಬಂದಿದ್ದ ಮುಸ್ಲಿಂ ವ್ಯಕ್ತಿ. ಅವನು ಸಹ ಪರ ಪುರುಷ ಮುಸ್ಲಿಂ ಮಹಿಳೆಯ ಮುಖ ನೋಡುವುದೇ, ಅವಳ ಹಣೆಯ

ಬರಹದಲ್ಲಿ ಇದ್ದಂತೆ ಆಗಲಿ ಎಂದು ಹೇಳಿ ಹೋಗುತ್ತಾನೆ. ನಂತರ ಬಂದವನು ಮುದಲಿಯಾರ್ ಆಗಿದ್ದನು ವಿದ್ಯಾವಂತ ಮೇಷ್ಟ್ರಾಗಿದ್ದನಾತ. ಅವನ ಹೆಂಡತಿ ನರಳುತ್ತಿದ್ದರೂ ನೀವೇ ಬರಬೇಕೆಂದು ಬೇಡುತ್ತಿದ್ದನು. ಬೆಳಗಾದಾಗ ಸಾವಿನ ಸುದ್ದಿ ಸಾರಿದಂತಹ ತಮಟೆಯ ಸದ್ದು ಕೇಳಿಸುತ್ತದೆ. ಆ ಮೂರೂ ಎಳೆಯ ವಯಸ್ಸಿನ ಹುಡುಗಿಯರು ರಾತ್ರಿ ನರಳಿ ನರಳಿ ಸತ್ತಿದ್ದರು. ಒಂದೇ ರಾತ್ರಿ ಮೂರೂ ಹೆಣಗಳು ನದಿಯ ಬಗಲಿನ ಅವರವರ ಸ್ಮಶಾನಗಳಲ್ಲಿ ಮಣ್ಣಾದವು. 'ಈ ನೆಲದ ಭಾರತೀಯ ಹೆಣ್ಣು ಮಕ್ಕಳ ಪರಿಸ್ಥಿತಿಗೆ ಅವಳ ಕಣ್ಣಲ್ಲಿ ಕಂಬನಿ ಇತ್ತು. ಅದೆಷ್ಟೋ ಹೊತ್ತು ತನ್ನ ದೇವರನ್ನು ದಾರಿ ತೋರಲು ಬೇಡಿದಳು, ಪರಿಪರಿಯಾಗಿ ಪ್ರಾರ್ಥಿಸಿದಳು. ಕಡೆಯ ನಿರ್ಧಾರ ಈಡಾಳದಾಗಿತ್ತು. ನೇರ ಅಪ್ಪ ಅಮ್ಮನ ಬಳಿಗೆ ಹೋಗಿ ಹೇಳಿದಳು. 'ನಾನು ಅಮೇರಿಕಾಗೆ ಹೋಗುತ್ತಿದ್ದೇನೆ. ವೈದ್ಯಕೀಯವನ್ನು ಓದಿ, ಭಾರತೀಯ ಮಹಿಳೆಯರಿಗೆ ಸಹಾಯ ಮಾಡಲು ಈ ಮಣ್ಣಿಗೆ ಹಿಂತಿರುಗುತ್ತೇನೆ'.[4]

ಈಡಾ ಕ್ರೈಸ್ತ ಮಿಷನರಿ ಮನೆತನದಲ್ಲಿ ಹುಟ್ಟಿದರೂ ಮಿಷನರಿಯಾಗಲು ಇಚ್ಛಿಸಿರಲಿಲ್ಲ. ಆದರೆ ಭಾರತದಲ್ಲಿರುವಾಗ ಒಂದು ರಾತ್ರಿಯಲ್ಲಿಯೇ ಮೂವರು ಮಹಿಳೆಯರು ಮರಣ ಹೊಂದುವುದು ನೋಡುತ್ತಾಳೆ. ಅವರ ಜೀವವನ್ನು ಉಳಿಸಬಹುದಾದ ಸ್ತ್ರೀ ವೈದ್ಯರು ಅಲ್ಲಿರುವುದಿಲ್ಲ. ಪುರುಷ ವೈದ್ಯರು ಸ್ತ್ರೀಯರನ್ನು ಪರೀಕ್ಷಿಸಿ ಚಿಕಿತ್ಸೆ ನೀಡುವುದಕ್ಕೆ, ಅಂದಿನ ಸಾಮಾಜಿಕ ನೀತಿ ನಿಯಮಗಳು ಅಡ್ಡಿಯಾಗುತ್ತವೆ. ಹಾಗಾಗಿ ಅವರು ಸಾಯುವುದು ಅನಿವಾರ್ಯವಾಗುತ್ತದೆ. ಇದನ್ನು ಕಂಡ ಈಡಾ, ಆ ಕ್ಷಣದಲ್ಲಿ ವೈದ್ಯಳಾಗಿ ಈ ಜನರಿಗೆ ನೆರವಾಗುವುದಾಗಿ ನಿರ್ಧರಿಸುತ್ತಾಳೆ. 'ನಾನು ಅಮೇರಿಕಾಗೆ ಹೋಗುತ್ತಿದ್ದೇನೆ. ವೈದ್ಯಕೀಯವನ್ನು ಓದಿ, ಭಾರತೀಯ ಮಹಿಳೆಯರಿಗೆ ಸಹಾಯ ಮಾಡಲು ಈ ಮಣ್ಣಿಗೆ ಹಿಂತಿರುಗುತ್ತೇನೆ' ಎಂದು ನಿರ್ಧಾರ ಮಾಡಿ ಅಮೇರಿಕಾದ ಮೆಡಿಕಲ್ ಶಾಲೆಗೆ ಸೇರ ಬಯಸುತ್ತಾಳೆ. 1892ರಲ್ಲಿ ಇವರ ತಂದೆ ಅವರ ಕುಟುಂಬವನ್ನು ವೆಲ್ಲೂರಿಗೆ ಸ್ಥಳಾಂತರಿಸಿದರು. ಈಡಾ ನ್ಯೂಯಾರ್ಕ್ನಲ್ಲಿ 'ರೀಜೆಂಟ್ ಪರೀಕ್ಷೆ'ಯನ್ನು ತೆಗೆದುಕೊಳ್ಳುತ್ತಾರೆ. 1895ರಲ್ಲಿ ಚಳಿಗಾಲದಲ್ಲಿ 'ಫಿಲಡೆಲ್ಫಿಯಾ ಮಹಿಳಾ ಮೆಡಿಕಲ್ ಕಾಲೇಜಿಗೆ' ದಾಖಲಾಗುತ್ತಾಳೆ. ನಂತರ ನ್ಯೂಯಾರ್ಕ್ನ 'ಕಾರ್ನೆಲ್ ಸಂಸ್ಥೆ' ಮೊಟ್ಟ ಮೊದಲ ಬಾರಿಗೆ ಹೆಣ್ಣು ಮಕ್ಕಳಿಗೆ ವೈದ್ಯರಂಗದ ಬಾಗಿಲು ತೆರೆದಿರುವುದು ತಿಳಿಯುತ್ತದೆ. ಇಲ್ಲಿ ಈಡಾಳ ಸ್ನೇಹವೃಂದ ಹಿಗ್ಗುತ್ತದೆ. ಬರ್ಚ್‌ಫೀಲ್ಡ್ ಮಿಲ್ಲಿಕನ್, ಈಡಾಳ ವಿಶೇಷ ಸ್ನೇಹವನ್ನು ಸಂಪಾದಿಸಿದ ವ್ಯಕ್ತಿಯಾಗುತ್ತಾನೆ. ಇವಳ ಮನಸ್ಸಿನಲ್ಲಿ ಮಿಲ್ಲಿಕಾನ್ ಇಷ್ಟವಾಗಿದ್ದ. ಇವನ ಸೂಕ್ಷ್ಮ ಸ್ವಭಾವ, ಜನರಿಗೆ ಸಹಾಯ ಮಾಡಬೇಕೆನ್ನುವ ಮನೋಭಾವ ಈಡಾಳನ್ನು ಆಕರ್ಷಿಸುತ್ತದೆ. ಆದರೆ 'ಭಾರತದ ಹೆಣ್ಣುಮಕ್ಕಳ ಪಾಡನ್ನು ಸುಧಾರಿಸುವ ಏಕಮೇವ ಉದ್ದೇಶದಿಂದ ನಾನು ವೈದ್ಯಳಾಗಿದ್ದೇನೆ. ಸೇವೆಯ ಈ ಹಾದಿಯಲ್ಲಿ ಮಿಲ್ಲಿಕನ್‌ಗೆ

ಎಲ್ಲಿ ಸ್ಥಳ ಕೊಡಲಿಈಡಾಗೆ ತಿಳಿಯದಾಗಿತ್ತು'.[5] ಹೆಣ್ಣು ಮಕ್ಕಳೊಡನೆ ಬೆರೆತು ಅವರುಗಳ ರೋಗ, ರುಜಿನ, ಹೆರಿಗೆಯ ನೂರು ಕಷ್ಟಗಳಲ್ಲಿ ಪಾಲ್ಗೊಳ್ಳಬಲ್ಲ ಮಹಿಳಾ ಡಾಕ್ಟರ್ ನಾನಾಗಿರುವೆ.

ಅಂದು ಎಳೆಯ ಮಕ್ಕಳು ಕತ್ತಲೆಯ ರಾತ್ರಿಯಲ್ಲಿ ಮಡಿದವು, ನಾನು ಆಗ ಅಸಹಾಯಕಳಾಗಿದ್ದೆ. ಇಂದು ಅಂಥ ಯಾವುದೇ ಸಮಸ್ಯೆಗೆ ದಾರಿಮಾಡಿಕೊಡುವುದಿಲ್ಲ ಎಂದು ನಿರ್ಧರಿಸಿ, ತನ್ನ ಪ್ರೀತಿ ಪ್ರೇಮವನ್ನು ಬಿಟ್ಟು ಬಂದಿಳಿದಿದ್ದಾರೆ. ಡಾ. ಈಡಾ ಸ್ಕಡರ್ ಆಗಿ ವೆಲ್ಲೂರಿನ ಮಿಷನ್ ಹೌಸ್‌ನಲ್ಲಿ ನೆಲೆಸಿದಳು. ಆಸ್ಪತ್ರೆ ತೆರೆಯಲು ಮುಂದಾದಳು. ಆಸ್ಪತ್ರೆ ತೆರೆಯಲು ಎಂಟು ಸಾವಿರ ಡಾಲರ್ ಹಣ ಬೇಕಿತ್ತು. ಅದು ಆ ಕಾಲಕ್ಕೆ ದೊಡ್ಡ ಮೊತ್ತವಾಗಿತ್ತು. ತನ್ನ ಛಲ ಬಿಡದೆ ಪ್ರಯತ್ನಿಸುತ್ತಾರೆ. ಈಡಾ ಮಿಸ್ ಟೇಬರ್ ಎಂಬಾಕೆಯನ್ನು ಭೇಟಿಯಾಗುತ್ತಾರೆ. ಇವರ ಮಾತುಗಳನ್ನು ಕೇಳಿದ ಮಿ. ಶೆಲ್ ಈಡಾಳನ್ನು ನೋಡ ಬಯಸುತ್ತಾರೆ. ನಿಮ್ಮ ಮಾತು ಕೇಳಿದೆ ಕುತೂಹಲವಾಯಿತು ಎಂದು ತಿಳಿದು ಭಾರತೀಯ ಮಹಿಳೆಯರಿಗಾಗಿ ಮಿ. ಶೆಲ್ 'ನನ್ನ ಪ್ರೀತಿಯ ಹೆಂಡತಿ ಮೇರಿ ಟೇಬಲ್ ಶೆಲ್ ನೆನಪಿಗೆ ನನ್ನ ಕೊಡುಗೆ ಇದು' ಎಂದು ಚೆಕ್ ಪುಸ್ತಕ ಕೈಗಿಟ್ಟು ಅದರಲ್ಲಿ 'ಹತ್ತು ಸಾವಿರ ಡಾಲರ್' ಕೊಟ್ಟು ಇದು ನಿಜಕ್ಕೂ ಅತ್ಯುತ್ತಮ ಆಸ್ಪತ್ರೆ ಆಗಬೇಕೆಂಬುದು ನನ್ನ ಆಸೆ' ಎಂದು ಕೊಡುತ್ತಾರೆ.

ಮೊದಲಿಗೆ ಸಣ್ಣ ಡಿಸ್ಪೆನ್ಸರಿಯೊಂದನ್ನು ತೆರೆದಳು. ತಂದೆಯ ಮರಣ ನಂತರ ಏಕಾಂಗಿಯಾಗಿ ವೈದ್ಯಕೀಯ ಹೋರಾಟ ಮಾಡುತ್ತಾರೆ. ಇವಳ ಸೇವೆಗೆ ಜನರು ಆಕರ್ಷಿತರಾದರು. ದಿನ ಕಳೆದಂತೆ ಹೆಂಗಸರು, ಗಂಡಸರು ಡಿಸ್ಪೆನ್ಸರಿಯ ಬಾಗಿಲು ತೆರೆಯುವ ಮೊದಲೇ ಕಾದು ಸಾಲುಗಟ್ಟಿ ಕುಳಿತಿರುತ್ತಿದ್ದರು. ಸಲೋಮಿ ಈಡಾಗೆ ಉತ್ಸಾಹದ ಶಿಷ್ಯಳಾಗುತ್ತಾಳೆ. ಮಹಿಳಾ ಆಸ್ಪತ್ರೆ ತೆರೆಯಬೇಕೆಂಬ ಇವಳ ಕನಸು ನನಸಾಯಿತು. ಅದಕ್ಕೆ 'ಮೇರಿ ಟೇಬಲ್ ಶೆಲ್ ಆಸ್ಪತ್ರೆ' ಎಂದು ಕರೆಯುತ್ತಾರೆ. ಆ ಮೂಲಕ ಆರ್ಥಿಕ ಸಹಾಯವನ್ನು ಸ್ಮರಿಸಿದಳು. ಈಡಾರವರು ಕೇವಲ ವೈದ್ಯೆಯಾಗಿ ಮಾದರಿಯಾಗದೆ ಮೌಢ್ಯದ ಗೋಡೆಯನ್ನು ಒಡೆಯುವ, ಅದರ ಆಚರಣೆಯ ತೊಡಕುಗಳನ್ನು ಕುರಿತು ಉತ್ತಮ ವಿಚಾರವನ್ನು ತಿಳಿಸುವ ವಿದ್ವತ್ಪೂರ್ಣ ಮಹಿಳೆಯಾಗಿ ಕಾಣುತ್ತಾರೆ. 'ಭಾರತೀಯ ಹೆಣ್ಣು ಮಕ್ಕಳು ಸ್ವತಃ ತಮಗೆ ತಾವೇ ಸಮರ್ಥರಾಗುವಂತೆ, ತಮ್ಮ ಸಹಾಯಕ್ಕೆ ತಾವೇ ನಿಲ್ಲುವಂತೆ ಸ್ವಾವಲಂಬಿಗಳನ್ನಾಗಿ ಮಾಡಬೇಕು'[6] ಎಂದು ನಿರ್ಧರಿಸಿದ ಈಡಾ ಅವರು ಹೆಣ್ಣು ಮಕ್ಕಳ ವೈದ್ಯ ಶಾಲೆಯನ್ನು ತೆರೆಯಲು ಮುಂದಾದರು. ಕೇವಲ ಆಸ್ಪತ್ರೆ ನಿರ್ಮಾಣದಿಂದ ಇಲ್ಲಿನವರ ಬದುಕು ಹಸನಾಗದು ಎಂದು ತಿಳಿದು ಮಹಿಳೆಯರಿಗಾಗಿ ಮೆಡಿಕಲ್ ಕಾಲೇಜು ತೆರೆಯುತ್ತಾರೆ.

ಭಾರತದ ಹೆಣ್ಣು ಮಕ್ಕಳೇ, ಭಾರತದ ಅಗತ್ಯಗಳಿಗೆ ಒದಗಿಬರಬೇಕು. ಈ

ನೆಲದ ಹೆಣ್ಣುಮಕ್ಕಳು ವೈದ್ಯರಾಗಬೇಕು, ಸ್ವಾವಲಂಬನೆಯ ಹಾದಿಯತ್ತ ಈಡಾಳ ಯೋಚನೆ ಹರಿದಿತ್ತು".[7] ಅದಕ್ಕಾಗಿ ಮದ್ರಾಸ್ ಪ್ರೆಸಿಡೆನ್ಸಿಯ ಬ್ರಿಟಿಷ್ ಮೆಡಿಕಲ್ ವಿಭಾಗದ ಕರ್ನಲ್ ಬ್ರೈಸನ್ ಅವರ ಕಛೇರಿಗೆ ಹೋಗುತ್ತಾರೆ. ವ್ಯಂಗ್ಯ ಮತ್ತು ಅನುಮಾನದಿಂದ ಹಣವಿಲ್ಲ, ಕಟ್ಟಡವಿಲ್ಲ, ಕಲಿಸುವ ಸ್ಟಾಫ್ ಕೂಡ ಇಲ್ಲ ಅದೂ ಭಾರತೀಯ ಮಹಿಳೆಯರಿಗೆ ವೈದ್ಯ ಶಾಲೆ ಇದಕ್ಕಿಂತ ಅಸಂಬದ್ಧವಾದದ್ದು, ದುಸ್ಸಾಹಸದ್ದು ಬೇರೆ ಯಾವುದಿಲ್ಲ, ಇವರನ್ನು ದಾದಿಯರನ್ನಾಗಿ ಮಾಡುವುದೇ ಕಷ್ಟದ ಕೆಲಸ, ಗಂಡಸರೊಡನೆ ಸ್ಪರ್ಧಿಸಿ ಪರೀಕ್ಷೆ ತೆಗೆದುಕೊಳ್ಳುವರೇ ಎಂದು ತಾತ್ಸಾರ ಮಾಡುತ್ತಾನೆ. 'ಓಹ್ ನಿನ್ನ ಮೊದಲ ಬ್ಯಾಚಿನ ಹುಡುಗಿಯರನ್ನು ಕರೆತಂದಿದ್ದೀಯ. ಅವರೆಲ್ಲರೂ ನಪಾಸಾದರೆ ಬೇಜಾರು ಮಾಡಿಕೊಳ್ಳಬೇಡ. ತೀರಾ ನಿರೀಕ್ಷೆ ಇಟ್ಟುಕೊಳ್ಳಬೇಡ. ಎಷ್ಟಾದರೂ ಅವರೆಲ್ಲ ಕೇವಲ ಹೆಂಗಸರು'[8] ಎಂದು ಕರ್ನಲ್ ಬ್ರೈಸನ್ ಅಪಮಾನಿಸುತ್ತಾನೆ. ಆಗಸ್ಟ್ 12, 1918ರಲ್ಲಿ 'ಮಹಿಳಾ ಮೆಡಿಕಲ್ ಶಾಲೆ'ಯನ್ನು ಕರ್ನಲ್ ಬ್ರೈಸನ್ ಉದ್ಘಾಟಿಸುತ್ತಾನೆ. ಮೊದಲ ತರಗತಿಗಳು ಆರಂಭವಾಗುತ್ತವೆ. ಫಲಿತಾಂಶದಲ್ಲೂ ಪ್ರತಿಯೊಬ್ಬರೂ ಪಾಸಾಗಿರುತ್ತಾರೆ. 'ಸಾಧ್ಯ, ಎಲ್ಲವೂ ಸಾಧ್ಯ' ಇದು ಡಾ. ಈಡಾಳ ಜೀವನದ ಮಂತ್ರವಾಗಿತ್ತು.

ಈಡಾ ಅವರು ತೊಂಬತ್ತು ವರ್ಷಗಳ ತುಂಬು ಜೀವನದ ಸಾರ್ಥಕ ಬದುಕನ್ನು ಮುಗಿಸಿ, ಮೇ ತಿಂಗಳ 24, 1960 ರಂದು ಇಹಲೋಕ ತ್ಯಜಿಸಿದರು. 1900ರಲ್ಲಿ ಒಂದು ಬೆಡ್ಡಿನ ಕ್ಲಿನಿಕ್ ಆಗಿ ಆರಂಭವಾದ ಈಡಾಳ ಕನಸಿನ ಆಸ್ಪತ್ರೆ ಇಂದು ಅತ್ಯಂತ ಪ್ರತಿಷ್ಠಿತ ಸಂಸ್ಥೆಯಾಗಿ ಬೆಳೆದಿದೆ. 1918ರಲ್ಲಿ ಆರಂಭಿಸಿದ ಮೆಡಿಕಲ್ ಶಾಲೆ 1942ರಲ್ಲಿ ಮೆಡಿಕಲ್ ಡಿಗ್ರಿ ನೀಡುವಂತಹ ಮೆಡಿಕಲ್ ಕಾಲೇಜಾಗಿದೆ. 1947ರಲ್ಲಿ ಪುರುಷರಿಗೂ ಪ್ರವೇಶ ನೀಡಲು ಪ್ರಾರಂಭವಾಗಿದೆ. 1950ರಲ್ಲಿ ಎಂ.ಡಿ. ಮತ್ತು ಎಂ.ಎಸ್. ಪದವಿಗಳು ಆರಂಭವಾಗಿವೆ. 90ಕ್ಕೂ ಹೆಚ್ಚು ಬಗೆಯ 'ಟ್ರೈನಿಂಗ್ ಪ್ರೋಗ್ರಾಮ್' ಗಳನ್ನು ನೀಡುತ್ತಿವೆ. 'ನ್ಯಾಷನಲ್ ಅಸೆಸ್ಮೆಂಟ್ ಅಂಡ್ ಅಕ್ರೆಡಿಟೇಷನ್ ಕೌನ್ಸಿಲ್' ಈ ಸಂಸ್ಥೆಗೆ 'ಐದು ನಕ್ಷತ್ರಗಳನ್ನು ನೀಡಿದೆ. 2003ರಲ್ಲಿ ಸಿ.ಎಂ.ಸಿ.'ನ್ಯಾಷನಲ್ ಸಿಟಿಜನ್ಸ್' ಪುರಸ್ಕಾರವನ್ನು ಪಡೆದುಕೊಂಡಿದೆ.

ಹೀಗೆ ಭಾರತದ ಮಹಿಳೆಯರ ನೋವಿನ ಸ್ಥಿತಿ-ಗತಿಗೆ ಕರಗಿದವಳು ಈಡಾ. ಭಾರತದ ಮಹಿಳೆಯರಿಗಾಗಿಯೇ ವೈದ್ಯಳಾಗಿ ಅಮೇರಿಕಾದ ಸರ್ವಸಂಪತ್ತನ್ನು, ಸುಖದ ಜೀವನವನ್ನು ತೊರೆದು ಹಿಂದಿರುಗಿದಳು. ಇಂತಹ ಸೇವೆಯನ್ನು ನೆನೆಯುವ, ಹೊಸ ಪೀಳಿಗೆಗೆ ಮಾದರಿಯಾಗಿ ಮುಂದಿಡುವ ಕೆಲಸಗಳು ಇನ್ನೂ ಆಗಬೇಕಿದೆ.

**ಕೊನೆ ಟಿಪ್ಪಣಿಗಳು:**

1. ನೇಮಿಚಂದ್ರ, (2013), ಹೋರಾಟದ ಹಾದಿಯಲ್ಲಿ ಧೀಮಂತ ಮಹಿಳೆಯರು, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪು.ಸಂ. 17
2. ಅದೇ, ಪು.ಸಂ. 12
3. ಅದೇ, ಪು.ಸಂ. 37
4. ಅದೇ, ಪು.ಸಂ. 33
5. ಅದೇ, ಪು.ಸಂ. 40
6. ಅದೇ, ಪು.ಸಂ. 73
7. ಅದೇ, ಪು.ಸಂ. 75
8. ಅದೇ, ಪು.ಸಂ. 82

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.